# ವಾರ್ತಾ ಪತ್ರಿಕೆ

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಅಂಚೆ ಸಂ. 06, ಬೀದರ–585 226

ಸಂಪುಟ–19, ಸಂಚಿಕೆ–1 ಜನವರಿ–ಜೂನ್, 2023


## ಕುಲಪತಿಗಳ ಮುನ್ನುಡಿ




ವಿಶ್ವವಿದ್ಯಾಲಯದ ಜನವರಿ ಯಿಂದ ಜೂನ್, 2023ರ ವರೆಗಿನ ವಾರ್ತಾಪತ್ರಿಕೆ ಸಂಪುಟ ಸಂಖ್ಯೆ–19 ಮತ್ತು ಸಂಚಿಕೆ–1 ನಿಮ್ಮ ಕೈಯಲ್ಲಿದೆ ಎಂದು ತಿಳಿಸಲು ನನಗೆ ತುಂಬಾ ಸಂತೋಷವೆನಿಸುತ್ತದೆ. ಈ ಮೇಲ್ಕಂಡ ಅವಧಿಯಲ್ಲಿ ವಿಶ್ವವಿದ್ಯಾಲಯವು ಮಾಡಿದ ಪ್ರಮುಖ ಕಾರ್ಯ ಚಟುವಟಿಕೆಗಳು ಮತ್ತು ಸಾಧನೆಗಳನ್ನು ಈ ಪತ್ರಿಕೆ ಒಳಗೊಂಡಿದೆ. ಕರ್ನಾಟಕ ಪಶುವೈದ್ಯಕೀಯ ಪರಿಷತ್, ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಸಹಯೋಗದೊಂದಿಗೆ ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರಿನ ವಿಶ್ವಪ್ರಾಣಿ ಆರೋಗ್ಯ ಸಂಸ್ಥೆ, ಮೀನುಗಾರಿಕೆ ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ಭೂತನಾಳ, ಹೈದ್ರಾಬಾದನ ಮ್ಯಾನೇಜ್ ಸಂಸ್ಥೆಯೊಂದಿಗೆ, ಮೀನುಗಾರಿಕೆ ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ಭೂತನಾಳ, ಕೇಂದ್ರೀಯ ಕುಕ್ಕುಟ ಅಭಿವೃದ್ಧಿ ಸಂಸ್ಥೆ, ಹೆಸರಘಟ್ಟದೊಂದಿಗೆ ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು ಮತ್ತು ಇಶಾ ಫೌಂಡೇಷನ್‌ದೊಂದಿಗೆ ಕೃಷಿ ವಿಜ್ಞಾನ ಕೇಂದ್ರ, ಮಂಗಳೂರು, ಜಾನುವಾರು ಸಂಶೋಧನೆ ಹಾಗೂ ಮಾಹಿತಿ ಕೇಂದ್ರ (ದೇವಣಿ) ಬೀದರ ರವರು ಕರ್ನಾಟಕ ಹಾಲು ಒಕ್ಕೂಟ, ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಇವರು ಸಹಭಾಗಿತ್ವ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ.

ಕರ್ನಾಟಕ ಸರ್ಕಾರದ ನಿರ್ದೇಶನದಂತೆ ನಮ್ಮ ಸಂಸ್ಥೆಗಳು ರೈತ ಸಮುದಾಯದ ಅನುಕೂಲಕ್ಕಾಗಿ ದತ್ತು ಪಡೆದ ಗ್ರಾಮಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸುತ್ತಿವೆ. ಹಾಸನದ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ಏಕೀಕರಣ ಶಿಬಿರವನ್ನು ಆಯೋಜಿಸಲಾಗಿದೆ. ಇದರಲ್ಲಿ ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಭಾಗವಹಿಸಿ ಅವರ ವ್ಯಕ್ತಿತ್ವ ಮತ್ತು ವೃತ್ತಿಪರ ಕೌಶಲ್ಯಗಳನ್ನು ಸುಧಾರಿಸಿಕೊಂಡರು. ವಿದ್ಯಾರ್ಥಿಗಳಲ್ಲಿ ದೇಶಭಕ್ತಿ ಮತ್ತು ಸಮಾಜ ಸೇವೆಯ ಗುಣಗಳನ್ನು ಬೆಳೆಸಲು ಈ ಕಾರ್ಯಕ್ರಮಗಳು ಸಹಕಾರಿಯಾಗುತ್ತವೆ.

ಕಪಪಮೀವಿವಿ, ಬೀದರನಲ್ಲಿ 17ನೇ ಜನವರಿ 2023 ರಂದು ವಿಶ್ವವಿದ್ಯಾಲಯ ಸಂಸ್ಥಾಪನಾ ದಿನವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಡಾ. ಶ್ರೀಕೃಷ್ಣ ಇಸ್ಲೂರ್, ಪ್ರಾಧ್ಯಾಪಕರು, ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು, ಇವರು ಕಪಪಮೀವಿವಿಯ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯನ್ನು ಪಡೆದರು. ವಿಶ್ವವಿದ್ಯಾಲಯದ ವಿವಿಧ ಅಂಗ ಸಂಸ್ಥೆಗಳಲ್ಲಿ ವಿಶ್ವ ಪಶುವೈದ್ಯಕೀಯ ದಿನಾಚರಣೆ, ವಿಶ್ವ ಕ್ಷೀರ ದಿನಾಚರಣೆಯಂತಹ ಕಾರ್ಯಕ್ರಮಗಳನ್ನು ಕೂಡ ವಿಜೃಂಭಣೆಯಿಂದ ಆಚರಿಸಲಾಯಿತು.

ಅಂತಿಮವಾಗಿ, ಸುದ್ದಿ ಪತ್ರದ ಈ ಆವೃತ್ತಿಯನ್ನು ಹೊರತರಲು ವಿಸ್ತರಣಾ ನಿರ್ದೇಶಕರು ಮತ್ತು ಅವರ ಸಿಬ್ಬಂದಿಯವರನ್ನು ಪ್ರಶಂಸಿಸುತ್ತೇನೆ.

ಸಹಿ
(ಕೆ.ಸಿ. ವೀರಣ್ಣ)
ಕುಲಪತಿಗಳು

## ಸಂಪಾದಕೀಯ ನುಡಿ



ನಮ್ಮ ವಿಶ್ವವಿದ್ಯಾಲಯದ, ಜನವರಿ ರಿಂದ ಜೂನ್ 2023 ರವರೆಗಿನ ಸುದ್ದಿ ಪತ್ರದ ಸಂಪುಟ ಸಂಖ್ಯೆ–19 ಮತ್ತು ಸಂಚಿಕೆ–1ನ್ನು ನಿಮ್ಮ ಮುಂದಿಡಲು ನನಗೆ ಬಹಳ ಹರ್ಷವೆನಿಸುತ್ತಿದೆ. ನಮ್ಮ ವಿಶ್ವವಿದ್ಯಾಲಯದ ಶಿಕ್ಷಕರು ಮತ್ತು ಇತರ ಸಿಬ್ಬಂದಿ ಸದಸ್ಯರು, ಬೋಧನೆ, ಸಂಶೋಧನೆ ಮತ್ತು ವಿಸ್ತರಣೆ ಕ್ಷೇತ್ರದಲ್ಲಿ ಮಾಡಿದ ಸಾಧನೆಗಳು ಸೇರಿದಂತೆ ಎಲ್ಲಾ ಪ್ರಮುಖ ಘಟನೆಗಳನ್ನು ಒಳಗೊಂಡ ಈ ಸುದ್ದಿ ಪತ್ರವನ್ನು ಹೊರತರಲು ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಲಾಗಿದೆ. ಈ ಅವಧಿಯಲ್ಲಿ ಹಲವಾರು ವಿಚಾರ ಸಂಕಿರಣಗಳು, ಸಮ್ಮೇಳನಗಳು, ಕಾರ್ಯಾಗಾರಗಳು ಮತ್ತು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಪಶುವೈದ್ಯಕೀಯ ಕ್ಷೇತ್ರ, ಪ್ರಾಣಿ ವಿಜ್ಞಾನ ಕ್ಷೇತ್ರ, ಹೈನುವಿಜ್ಞಾನ ಕ್ಷೇತ್ರ, ಮತ್ತು ಮೀನುಗಾರಿಕೆ ಕ್ಷೇತ್ರಗಳಲ್ಲಿನ ಬೋಧನೆ, ಸಂಶೋಧನೆ ಮತ್ತು ವಿಸ್ತರಣೆಯನ್ನು ಬಲಪಡಿಸಲು ವಿಶ್ವವಿದ್ಯಾಲಯವು ಅನೇಕ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಂಸ್ಥೆಗಳೊಂದಿಗೆ ಒಡಂಬಡಿಕೆಗಳಿಗೆ ಸಹಿ ಹಾಕಿದೆ. ನಮ್ಮ ಹಲವಾರು ಶಿಕ್ಷಕರು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆಯುವ ಮೂಲಕ ನಮ್ಮ ವಿಶ್ವವಿದ್ಯಾಲಯಕ್ಕೆ ಹೆಮ್ಮೆ ತಂದಿದ್ದಾರೆ.

ಸಹಿ
(ಎನ್.ಎ. ಪಾಟೀಲ)
ಮುಖ್ಯ ಸಂಪಾದಕರು ಮತ್ತು ವಿಸ್ತರಣಾ ನಿರ್ದೇಶಕರು

## ಆಯೋಜಿತ ತರಬೇತಿಗಳು ಕಾರ್ಯಕ್ರಮಗಳು /ಸಮಾವೇಶಗಳು /ವಿಚಾರ ಸಂಕೀರಣಗಳು / ಪ್ರದರ್ಶನಗಳು /ಪಶು ಆರೋಗ್ಯ ಶಿಬಿರಗಳು /ಕ್ಷೇತ್ರ ದಿನಗಳು

### ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು

- ಬೆಂಗಳೂರಿನ ಪಶುವೈದ್ಯಕೀಯ ಸೂಕ್ಷ್ಮಜೀವಾಣುಶಾಸ್ತ್ರ ವಿಭಾಗದ ಕಪಪಮೀವಿವಿ–ಸಿವಿಎ ರೇಬೀಸ್ ರೋಗನಿರ್ಣಯ ಪ್ರಯೋಗಾಲಯವು ವಿಶ್ವ ಪ್ರಾಣಿ ಆರೋಗ್ಯ ಸಂಸ್ಥೆಯ ಏಷ್ಯಾ ಮತ್ತು ಪೆಸಿಫಿಕ್ ಪ್ರಾದೇಶಿಕ ಪ್ರಾತಿನಿಧ್ಯದ ಸಹಯೋಗದೊಂದಿಗೆ 18 ರಿಂದ 21ನೇ ಜನವರಿ, 2023 ರವರೆಗೆ "ಪ್ರಾಣಿಗಳ ರೇಬೀಸ್ ರೋಗ ನಿರ್ಣಯ" ದ ಕುರಿತು ಅಂತರರಾಷ್ಟ್ರೀಯ ಉಪ–ಪ್ರಾದೇಶಿಕ ತರಬೇತಿ ಕಾರ್ಯಾಗಾರವನ್ನು ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ಆಯೋಜಿಸಿತ್ತು. ಬಾಂಗ್ಲಾದೇಶ, ಭೂತಾನ್, ಭಾರತ, ನೇಪಾಳ, ಶ್ರೀಲಂಕಾ ಮತ್ತು ಜಾಂಬಿಯಾದ ಪ್ರತಿನಿಧಿಗಳು ಈ ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿದರು.




- ಪ್ರಾಣಿಜನ್ಯ ರೋಗಗಳ ತಡೆಗಟ್ಟುವಿಕೆ ಮತ್ತು ನಿಯಂತ್ರಣಕ್ಕಾಗಿ ರಾಷ್ಟ್ರೀಯ 'ಒಂದು ಆರೋಗ್ಯ' ಕಾರ್ಯಕ್ರಮದ ಅಡಿಯಲ್ಲಿ "ಪ್ರಾಣಿಗಳಲ್ಲಿ ರೇಬೀಸ್ ರೋಗದ ಪತ್ತೆಹಚ್ಚುವಿಕೆಗಾಗಿ ಮೆದುಳಿನ ಮಾದರಿಗಳನ್ನು ಸಂಗ್ರಹಿಸುವಿಕೆ ಮತ್ತು ಪ್ರಯೋಗಾಲಯದಲ್ಲಿ ರೋಗ ನಿರ್ಣಯ" ಕುರಿತು ತರಬೇತಿಯನ್ನು ಕಪಪಮೀವಿವಿ–ಸಿವಿಎ ರೇಬೀಸ್ ರೋಗನಿರ್ಣಯ ಪ್ರಯೋಗಾಲಯವು 1 ರಿಂದ 3ನೇ ಮಾರ್ಚ್, 2023 ರವರೆಗೆ ಬೆಂಗಳೂರಿನ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿತ್ತು. ರಾಷ್ಟ್ರೀಯ ರೋಗ ನಿಯಂತ್ರಣ ಕೇಂದ್ರ (ಎನ್‌ಸಿಡಿಸಿ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ಭಾರತ ಸರ್ಕಾರದ ಸಹಯೋಗದೊಂದಿಗೆ ಆಯೋಜಿಸಿದ್ದ ಈ ತರಬೇತಿಯಲ್ಲಿ ಉತ್ತರ ಭಾರತದ ರಾಜ್ಯಗಳಿಂದ ಪ್ರತಿನಿಧಿಗಳು /ಪಶುವೈದ್ಯರು ಭಾಗವಹಿಸಿದ್ದರು.



- 6ನೇ ಏಪ್ರಿಲ್, 2023 ರಂದು ಕಪಪಮೀವಿವಿಯು, ವಿಶ್ವ ಪ್ರಾಣಿ ಆರೋಗ್ಯ ಸಂಸ್ಥೆಯ ಏಷ್ಯಾ ಮತ್ತು ಪೆಸಿಫಿಕ್ ಪ್ರಾದೇಶಿಕ ಪ್ರಾತಿನಿಧ್ಯದ ಸಹಯೋಗದೊಂದಿಗೆ ದಕ್ಷಿಣ ಏಷ್ಯಾ ರೇಬೀಸ್ ಪ್ರಯೋಗಾಲಯಗಳ ಜಾಲಬಂಧ (ಸಾ–ರ್‍ಯಾಬನೆಟ್)– ಪ್ರಾದೇಶಿಕ ವೇದಿಕೆಯನ್ನು ಸ್ಥಾಪಿಸಿ ಈ ಜಾಲಬಂಧದ ಮೊದಲ ವರ್ಚುವಲ್ ಸಭೆಯನ್ನು ನಡೆಸಲಾಯಿತು. ದಕ್ಷಿಣ ಏಷ್ಯಾದ ಪ್ರಾದೇಶಿಕ ಸಹಕಾರ ಸಂಘ (ಸಾರ್ಕ್)ದ ಏಳು ದೇಶಗಳು (ಅಫ್ಘಾನಿಸ್ತಾನ, ಬಾಂಗ್ಲಾದೇಶ, ಭೂತಾನ, ಭಾರತ, ನೇಪಾಳ, ಪಾಕಿಸ್ತಾನ ಮತ್ತು ಶ್ರೀಲಂಕಾ) ಇದರ ಸದಸ್ಯರಾಗಿದ್ದು, ಒಟ್ಟು 22 ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು.

- ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು ಇಲ್ಲಿ 'ವಿಶ್ವ ಪರಿಸರ ದಿನಾಚರಣೆ–2023'ನ್ನು ಮಾನ್ಯ ಕುಲಪತಿಗಳಾದ ಪ್ರೊ॥ ಕೆ.ಸಿ. ವೀರಣ್ಣ ಇವರು ಉದ್ಘಾಟಿಸಿದರು. ಸದರಿ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳಾದ ಡಾ॥ ಆರ್.ಎನ್. ಶ್ರೀನಿವಾಸಗೌಡ, ಮುನೇಶ ಕಶ್ತಿ, ವಸಂಗಮೂರ್ತಿ, ಮನೀಶ ಸೂರ್ಯ ಇವರು ಉಪಸ್ಥಿತರಿದ್ದರು. ಡಾ॥ ಎಂ. ನಾರಾಯಣಸ್ವಾಮಿ, ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು ಇವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.



- 6ನೇ ಏಪ್ರಿಲ್, 2023 ರಂದು ಕಪಪಮೀವಿವಿಯು, ವಿಶ್ವ ಪ್ರಾಣಿ ಆರೋಗ್ಯ ಸಂಸ್ಥೆಯ ಏಷ್ಯಾ ಮತ್ತು ಪೆಸಿಫಿಕ್ ಪ್ರಾದೇಶಿಕ ಪ್ರಾತಿನಿಧ್ಯದ ಸಹಯೋಗದೊಂದಿಗೆ ದಕ್ಷಿಣ ಏಷ್ಯಾ ರೇಬೀಸ್ ಪ್ರಯೋಗಾಲಯಗಳ ಜಾಲಬಂಧ (ಸಾ–ರ್‍ಯಾಬನೆಟ್)– ಪ್ರಾದೇಶಿಕ ವೇದಿಕೆಯನ್ನು ಸ್ಥಾಪಿಸಿ ಈ ಜಾಲಬಂಧದ ಮೊದಲ ವರ್ಚುವಲ್ ಸಭೆಯನ್ನು ನಡೆಸಲಾಯಿತು. ದಕ್ಷಿಣ ಏಷ್ಯಾದ ಪ್ರಾದೇಶಿಕ ಸಹಕಾರ ಸಂಘ (ಸಾರ್ಕ್)ದ ಏಳು ದೇಶಗಳು (ಅಫ್ಘಾನಿಸ್ತಾನ, ಬಾಂಗ್ಲಾದೇಶ, ಭೂತಾನ, ಭಾರತ, ನೇಪಾಳ, ಪಾಕಿಸ್ತಾನ ಮತ್ತು ಶ್ರೀಲಂಕಾ) ಇದರ ಸದಸ್ಯರಾಗಿದ್ದು, ಒಟ್ಟು 22 ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು.

### ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ

- ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (ಆರ್‌ಕೆವಿವೈ) ಅನುದಾನದ ಅಡಿಯಲ್ಲಿ 2023 ಸಾಲಿನಲ್ಲಿ (ಜನವರಿ 23, ಫೆಬ್ರವರಿ 2, ಮತ್ತು ಮಾರ್ಚ್ 1) ರಂದು ಹಿಡುವಳಿದಾರರಿಗೆ ಹುಲ್ಲುಗಾವಲು

ನಿರ್ವಹಣಾ ವ್ಯವಸ್ಥೆ” ಅಡಿಯಲ್ಲಿ ಮೂರು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ನಂತರ ಮೇವಿನ ಬೀಜಗಳ ಕಿಟ್‌ಗಳು ಮತ್ತು ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಒಟ್ಟಾರೆ 117 ರೈತರು ಈ ಕಾರ್ಯಕ್ರಮಗಳಿಂದ ಪ್ರಯೋಜನ ಪಡೆದುಕೊಂಡರು.




## ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ

- 15ನೇ ಫೆಬ್ರುವರಿ, 2023 ರಂದು ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನದ ದತ್ತು ಗ್ರಾಮವಾದ ಕುಪ್ಪಳ್ಳಿ, ಯಲ್ಲಿ ಉಣ್ಣೆ ನಿಯಂತ್ರಿಸಲು ಗಿಡಮೂಲಿಕೆಗಳ ಔಷಧಿ ತಯಾರಿಕೆಯ ಪ್ರಾತ್ಯಕ್ಷಿಕೆಯನ್ನು ಆಯೋಜಿಸಲಾಗಿತ್ತು. ಸುಮಾರು 55 ರೈತರು ಪ್ರಾತ್ಯಕ್ಷಿಕೆಯಲ್ಲಿ ಭಾಗವಹಿಸಿದ್ದರು.



- 22 ರಿಂದ 25ನೇ ಫೆಬ್ರುವರಿ, 2023 ರಂದು ಹೆಸರಘಟ್ಟದಲ್ಲಿ ಏರ್ಪಡಿಸಿದ್ದ “ರಾಷ್ಟ್ರೀಯ ತೋಟಗಾರಿಕಾ ಮೇಳ 2023” ಕ್ಕೆ 50 ರೈತರ ಕ್ಷೇತ್ರ ಭೇಟಿಯನ್ನು ಆಯೋಜಿಸಲಾಗಿತ್ತು.



- ಐಸಿಎಆರ್–ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ, ಹೆಸರಘಟ್ಟ, ಬೆಂಗಳೂರಿನ ಸಹಯೋಗದೊಂದಿಗೆ ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನವು, 7ನೇ ಮಾರ್ಚ್, 2023 ರಂದು ಹಾಸನದ ಕುಪ್ಪಳ್ಳಿಯ ದತ್ತು ಗ್ರಾಮದಲ್ಲಿ “ಜಾನುವಾರು ಆಧಾರಿತ ಸಾವಯವ ತೋಟಗಾರಿಕೆ” ಕುರಿತು ತರಬೇತಿಯನ್ನು ಆಯೋಜಿಸಲಾಗಿತ್ತು.



- ದತ್ತು ಗ್ರಾಮ, ಕುಪ್ಪಳ್ಳಿಯಲ್ಲಿ 25ನೇ ಮೇ, 2023 ರಂದು ವಿಶ್ವ ಪರಿಸರ ದಿನ – 2023 ರ ಸಂದರ್ಭದಲ್ಲಿ ಮರ ಮೇವು ಉತ್ಪಾದನೆಯನ್ನು ಉತ್ತೇಜಿಸಲು “ಹವಾಮಾನ ಸ್ಥಿತಿಸ್ಥಾಪಕ ಮತ್ತು ಸ್ಮಾರ್ಟ್ ಕೃಷಿ” ಮತ್ತು “ಹವಾಮಾನ ಸ್ಥಿತಿಸ್ಥಾಪಕತ್ವಕ್ಕಾಗಿ ಸಮರ್ಥ ಕುರಿ ಮತ್ತು ಮೇಕೆ ಉತ್ಪಾದನೆ” ಎಂಬ ವಿಷಯದ ಬಗ್ಗೆ ಜಾಗೃತಿ ಅಭಿಯಾನವನ್ನು ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನದ ವತಿಯಿಂದ ಆಯೋಜಿಸಿಲಾಗಿತ್ತು.



- ಹಾಸನದ ಪಶುವೈದ್ಯಕೀಯ ಮಹಾವಿದ್ಯಾಲಯವು, ಐಸಿಎಆರ್–ಭಾರತೀಯ ತೋಟಗಾರಿಕಾ ಸಂಸ್ಥೆ, ಬೆಂಗಳೂರು ಸಹಯೋಗದಲ್ಲಿ 30 ನೇ ಮಾರ್ಚ್, 2023 ರಂದು ಹಾಸನದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಹರಳಹಳ್ಳಿಯ ದತ್ತು ಪಡೆದ ಶಾಲೆಯಲ್ಲಿ ವಿದ್ಯಾಂಜಲಿ ಯೋಜನೆಯಡಿಯಲ್ಲಿ “ಪಶು ಮತ್ತು ತೋಟಗಾರಿಕೆ ಉತ್ಪನ್ನಗಳು” ಎಂಬ ವಿಷಯದ ಬಗ್ಗೆ ಒಂದು ದಿನದ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.



- ಕರ್ನಾಟಕ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮತ್ತು ರಾಷ್ಟ್ರೀಯ ಸೇವಾ ಯೋಜನೆಯಡಿ ಪ್ರಾದೇಶಿಕ ನಿರ್ದೇಶನಾಲಯದ ಆಶ್ರಯದಲ್ಲಿ 11 ರಿಂದ 17ನೇ ಮಾರ್ಚ್, 2023 ರವರೆಗೆ ಹಾಸನದ ಪಶುವೈದ್ಯಕೀಯ

ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ಏಕತಾ ಶಿಬಿರವನ್ನು ಆಯೋಜಿಸಲಾಯಿತು. ಈ ಶಿಬಿರದಲ್ಲಿ ಕರ್ನಾಟಕ, ಕೇರಳ (ಕೈಗಾರಿಕಾ ತರಬೇತಿ ನಿರ್ದೇಶನಾಲಯ), ತಮಿಳುನಾಡು (ತನುವಾಸ್) ಮತ್ತು ಮಹಾರಾಷ್ಟ್ರ (ಕೃಷಿ ಕಾಲೇಜು, ದಾಪೋಲಿ) ರಾಜ್ಯಗಳ 79 ವಿದ್ಯಾರ್ಥಿಗಳು ಮತ್ತು 66 ವಿದ್ಯಾರ್ಥಿನಿಯರು, ಸ್ವಯಂ ಸೇವಕರು ಮತ್ತು ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮ ಅಧಿಕಾರಿಗಳು ಭಾಗವಹಿಸಿದ್ದರು.




- 4 ರಿಂದ 10ನೇ ಜನೆವರಿ, 2023 ರವರೆಗೆ ಹಾಸನ ಜಿಲ್ಲೆಯ ಗೋಪನಹಳ್ಳಿ ಗ್ರಾಮದಲ್ಲಿ ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನದ ರಾಷ್ಟ್ರೀಯ ಸೇವಾ ಯೋಜನೆಯ ಘಟಕವು (ಘಟಕ–2) (ಹಮೂಲ ಹಾಗೂ ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ) ಇವುಗಳ ಸಹಯೋಗದೊಂದಿಗೆ ಬಿವಿಎಸ್‌ಸಿ ಮತ್ತು ಎಚ್ 2ನೇ ವರ್ಷದ ಸ್ವಯಂ ಸೇವಕರಿಗೆ ವಿಶೇಷ ವಾರ್ಷಿಕ ಶಿಬಿರವನ್ನು ಆಯೋಜಿಸಲಾಗಿತ್ತು.



- ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನವು 20ನೇ ಜನೆವರಿ, 2023 ರಂದು ಹಾಸನ ಜಿಲ್ಲೆಯ ಜಗರವಳ್ಳಿಯಲ್ಲಿ “ಜಾನುವಾರುಗಳ ರೋಗಗಳು ಮತ್ತು ಪ್ರಥಮ ಚಿಕಿತ್ಸೆ” ಕುರಿತು ರೈತರಿಗೆ ಒಂದು ದಿನದ ಜಾಗೃತಿ ತರಬೇತಿಯನ್ನು ಆಯೋಜಿಸಿತು. ತರಬೇತಿ ಕಾರ್ಯಕ್ರಮದಲ್ಲಿ 70 ರೈತರು ಭಾಗವಹಿಸಿದ್ದರು.



- ಪಶುವೈದ್ಯಕೀಯ ಮಹಾವಿದ್ಯಾಲಯ ಹಾಸನದ, ಔಷಧ ಮತ್ತು ವಿಷಶಾಸ್ತ್ರ ವಿಭಾಗವು ಐಸಿಎಆರ್–ಎಸ್‌ಸಿಎಸ್‌ಪಿ/ ಟಿಎಸ್‌ಪಿ ಅನುದಾನದ ಅಡಿಯಲ್ಲಿ ವಿದ್ಯಾರ್ಥಿಗಳು ಮತ್ತು ಬೋಧಕ ಸಿಬ್ಬಂದಿಗೆ 10ನೇ ಫೆಬ್ರವರಿ, 2023 ರಂದು “ಪ್ರಾಣಿ ಸಂಶೋಧನೆಯಲ್ಲಿ ಮೂಲಭೂತ ಜೈವಿಕ ಅಂಕಿಅಂಶಗಳು" ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿತು. ಒಟ್ಟು 90 ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಯವರು ಭಾಗವಹಿಸಿದ್ದರು.



- ಪಶುವೈದ್ಯಕೀಯ ಮಹಾವಿದ್ಯಾಲಯ ಹಾಸನದ, ಔಷಧ ಮತ್ತು ವಿಷಶಾಸ್ತ್ರ ವಿಭಾಗವು ಐಸಿಎಆರ್– ಎಸ್‌ಸಿಎಸ್‌ಪಿ / ಟಿಎಸ್‌ಪಿ ಅನುದಾನದಡಿಯಲ್ಲಿ 2023 ರ ಫೆಬ್ರುವರಿ, 23 ರಂದು ಸಿಸಿಎಸ್‌ಇಎ “ನೈತಿಕ ಮಾರ್ಗಸೂಚಿಗಳಿಗೆ ಅನುಗುಣವಾಗಿ ಪ್ರಯೋಗಾಲಯ ಪ್ರಾಣಿ ಸಂಶೋಧನೆ" ಕುರಿತು ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಈ ತರಬೇತಿ ಕಾರ್ಯಕ್ರಮದಲ್ಲಿ 90 ರೈತರು ಭಾಗವಹಿಸಿದ್ದರು.

- ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನದಲ್ಲಿ ಏಳು ದಿನಗಳ “ವೈಜ್ಞಾನಿಕ ಕೋಳಿ ಸಾಕಾಣಿಕೆ ಮತ್ತು ಮಾಂಸ ಉತ್ಪಾದನೆಗಳ ಮೌಲ್ಯವರ್ಧನೆ” ತರಬೇತಿ ಕಾರ್ಯಕ್ರಮವನ್ನು 20 ರಿಂದ 27ನೇ ಫೆಬ್ರುವರಿ, 2023 ರವರೆಗೆ ಐಸಿಎಆರ್– ಎಸ್‌ಸಿಎಸ್‌ಪಿ / ಟಿಎಸ್‌ಪಿ ಅನುದಾನದ ಅಡಿಯಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿ ಕಾರ್ಯಕ್ರಮದಲ್ಲಿ 38 ರೈತರು ಭಾಗವಹಿಸಿದ್ದರು.



- ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನದಲ್ಲಿ ಪರಿಶಿಷ್ಠ ಪಂಗಡದ ಮಹಿಳೆಯರಿಗೆ “ಲಾಭದಾಯಕ ಕುರಿ ಸಾಕಾಣಿಕೆಯಲ್ಲಿ ಕೌಶಲ್ಯಾಭಿವೃದ್ಧಿ” ತರಬೇತಿ ಕಾರ್ಯಕ್ರಮವನ್ನು ಭಾರತೀಯ ಕೃಷಿ ಅನುಸಂಧಾನ ಪರಿಷತ್ ಅನುದಾನದಡಿಯಲ್ಲಿ 28ನೇ ಫೆಬ್ರುವರಿ ರಿಂದ 9ನೇ ಮಾರ್ಚ್, 2023 ರವರೆಗೆ ಆಯೋಜಿಸಲಾಗಿತ್ತು.



- ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನದಲ್ಲಿ "ಸುಧಾರಿತ ಕೋಳಿ ಸಾಕಾಣಿಕೆ" ಕುರಿತು ತರಬೇತಿ ಕಾರ್ಯಕ್ರಮವನ್ನು ಭಾರತೀಯ ಕೃಷಿ ಅನುಸಂಧಾನ ಪರಿಷತ್ ಅಡಿಯಲ್ಲಿ 6 ರಿಂದ 10ನೇ ಮಾರ್ಚ್, 2023 ರವರೆಗೆ ವಿವಿಧ ಗ್ರಾಮಗಳ ಪರಿಶಿಷ್ಠ ಪಂಗಡದ ಮಹಿಳೆಯರಿಗೆ ಆಯೋಜಿಸಲಾಗಿತ್ತು.



- ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ ಹಾಗೂ ಮ್ಯಾನೇಜ್, ಹೈದರಾಬಾದ್ ರವರ ಸಹಯೋಗದೊಂದಿಗೆ ಮೂರು ದಿನಗಳ ಆನ್‌ಲೈನ್ (ಅಂತರ್ಜಾಲ ಮುಖೇನ) ತರಬೇತಿ ಕಾರ್ಯಕ್ರಮವನ್ನು 29 ರಿಂದ 31ನೇ ಮೇ, 2023 ವರೆಗೆ "ಜಾನುವಾರುಗಳ ಆರೋಗ್ಯ ಮತ್ತು ಉತ್ಪಾದನೆಗಾಗಿ ಪ್ರಾಣಿ ಪೋಷಣೆಯಲ್ಲಿ ಹೊಸ/ನವ ಪ್ರವೃತ್ತಿಗಳು" ಎಂಬ ವಿಷಯದ ಬಗ್ಗೆ ರಾಷ್ಟ್ರೀಯ, ರಾಜ್ಯದ ಹಾಗೂ ಕೃಷಿ ವಿಜ್ಞಾನ ಕೇಂದ್ರಗಳ ಮತ್ತು ವಿಶ್ವವಿದ್ಯಾಲಯಗಳ ವಿಸ್ತರಣಾ ಅಧಿಕಾರಿಗಳಿಗೆ ಹಮ್ಮಿಕೊಳ್ಳಲಾಗಿತ್ತು. ತರಬೇತಿ ಕಾರ್ಯಕ್ರವದಲ್ಲಿ ದೇಶಾದ್ಯಂತ ಸುಮಾರು 330 ಅಧಿಕಾರಿಗಳು ಹಾಗೂ ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದರು.

- ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ ಹಾಗೂ ಮ್ಯಾನೇಜ್, ಹೈದರಾಬಾದ್ ರವರ ಸಹಯೋಗದೊಂದಿಗೆ "ಹೈನುಗಾರಿಕೆ–ಲಾಭದಾಯಕ ಉದ್ಯಮ" ಎಂಬ ವಿಷಯದ ಮೇಲೆ ಆನ್‌ಲೈನ್ ತರಬೇತಿ ಕಾರ್ಯಕ್ರಮವನ್ನು 20 ರಿಂದ 22ನೇ ಜೂನ್, 2023 ರವರೆಗೆ ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ ದಲ್ಲಿ ಆಯೋಜಿಸಲಾಗಿತ್ತು. ದೇಶಾದ್ಯಂತ ಪ್ರಗತಿಪರ ರೈತರು, ಪಶುವೈದ್ಯಾಧಿಕಾರಿಗಳು, ಉದ್ಯಮಿಗಳು, ಸ್ನಾತಕೋತ್ತರ ವಿದ್ಯಾರ್ಥಿಗಳು ಈ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

- ಹೈದರಾಬಾದ್‌ನ ರಾಷ್ಟ್ರೀಯ ಮಾಂಸ ಸಂಶೋಧನಾ ಕೇಂದ್ರದ ಸಹಯೋಗದೊಂದಿಗೆ "ಮಾಂಸ ಉತ್ಪಾದನೆ, ಸಂಸ್ಕರಣೆ ಮತ್ತು ಕೌಶಲ್ಯಾಬಿವೃದ್ಧಿಯಲ್ಲಿ ವೈಜ್ಞಾನಿಕ ತಂತ್ರಜ್ಞಾನಗಳು" ಎಂಬ ಎರಡು ದಿನಗಳ ಕಾರ್ಯಾಗಾರವನ್ನು 9 ರಿಂದ 10ನೇ ಫೆಬ್ರುವರಿ, 2023 ರಂದು ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ 52 ರೈತರು ಹಾಗೂ ಉದ್ಯಮಿಗಳು ಭಾಗವಹಿಸಿದ್ದರು.



- ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ, ರಾಜೀವ್ ಗಾಂಧಿ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಟೆಲೆಕ್ಚುವಲ್ ಪ್ರಾಪರ್ಟಿ ಮ್ಯಾನೇಜ್ಮೆಂಟ್, ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ, ಭಾರತ ಸರ್ಕಾರದ ಸಹಯೋಗದೊಂದಿಗೆ ರಾಷ್ಟ್ರೀಯ ಬೌದ್ಧಿಕ ಆಸ್ತಿ ಜಾಗೃತಿ ಮಿಷನ್ ಅಡಿಯಲ್ಲಿ ಬೌದ್ಧಿಕ ಹಕ್ಕು ಕುರಿತು ರಾಷ್ಟ್ರೀಯ ಆನಲೈನ್ ಕಾರ್ಯಾಗಾರವನ್ನು 1ನೇ ಮಾರ್ಚ್, 2023 ರಂದು ಆಯೋಜಿಸಲಾಗಿತ್ತು.

- ಭಾರತೀಯ ಮಹಿಳಾ ಪಶುವೈದ್ಯರ ಸಂಘ, ಕರ್ನಾಟಕ ಅಧ್ಯಾಯ ಮತ್ತು ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ ಜಂಟಿಯಾಗಿ 24ನೇ ಜೂನ್, 2023 ರಂದು ಹಾಸನದ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ಒಂದು ದಿನದ ರಾಜ್ಯ ಮಟ್ಟದ ತಾಂತ್ರಿಕ ಕಾರ್ಯಾಗಾರ "ಡಿಜಿಟ್‌ಆಲ್" ಅನ್ನು ಆಯೋಜಿಸಲಾಗಿತ್ತು. ಈ ಕಾರ್ಯಾಗಾರದಲ್ಲಿ ಕರ್ನಾಟಕದ ತುಮಕೂರು, ಮಂಡ್ಯ, ಶಿವಮೊಗ್ಗ, ಉಡುಪಿ, ಮೈಸೂರು, ವಿಜಯಪುರ, ಉತ್ತರ ಕನ್ನಡ, ಮಂಗಳೂರು, ವಿಜಯಪುರ, ಚಿಕ್ಕಮಗಳೂರು, ಬೆಂಗಳೂರು ಮತ್ತು ಹಾಸನ ಜಿಲ್ಲೆಗಳಿಂದ 103 ಮಹಿಳಾ ಪಶುವೈದ್ಯರು ಭಾಗವಹಿಸಿದ್ದರು.




## ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ

- 20ನೇ ಜೂನ್, 2023 ರಂದು ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗನಲ್ಲಿ "ಮಳೆಗಾಲದಲ್ಲಿ ಜಾನುವಾರುಗಳ ನಿರ್ವಹಣೆ" ಕುರಿತು ರೈತರಿಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.



## ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು

- ಮೀನುಗಾರಿಕಾ ಮಹಾವಿದ್ಯಾಲಯ, ಮಂಗಳೂರು ಮತ್ತು ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ, ಹೈದರಾಬಾದ್ ಇವರ ಸಹಯೋಗದೊಂದಿಗೆ 27 ಹಾಗೂ 28ನೇ ಜನವರಿ, 2023 ರಂದು "ಫಿಶ್ ಫೆಸ್ಟಿವಲ್ 2023" ಕಾರ್ಯಕ್ರಮವನ್ನು ಮೀನುಗಾರಿಕಾ ಮಹಾವಿದ್ಯಾಲಯ, ಮಂಗಳೂರು ಆವರಣದಲ್ಲಿ ಆಯೋಜಿಸಲಾಗಿತ್ತು.



- ಕೌಶಲ್ಯಾಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ 9ನೇ ಫೆಬ್ರವರಿ, 2023 ರಂದು ಮಂಗಳೂರಿನ ಮೀನುಗಾರಿಕಾ ಮಹಾವಿದ್ಯಾಲಯದ ಅಂತಿಮ ವರ್ಷದ ಬಿ.ಎಫ್.ಎಸ್ಸಿ. ವಿದ್ಯಾರ್ಥಿಗಳಿಗಾಗಿ ಕುಂದಾಪುರದ ಪಂಜರ ಮೀನು ಕೃಷಿ ಘಟಕಕ್ಕೆ ಕ್ಷೇತ್ರ ಭೇಟಿ ಮಾಡಲಾಯಿತು.



- **ಜಾನುವಾರು ಸಂಶೋಧನೆ ಮತ್ತು ಮಾಹಿತಿ ಕೇಂದ್ರ, (ದೇವಣಿ) ಬೀದರ**
- ಜಾನುವಾರು ಸಂಶೋಧನೆ ಹಾಗೂ ಮಾಹಿತಿ ಕೇಂದ್ರ (ದೇವಣಿ), ಕಟ್ಟಿತುಗಾಂವ, ಬೀದರ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಇವರ ಸಹಯೋಗದಲ್ಲಿ ರೈತ ಮಹಿಳೆಯರಿಗಾಗಿ 1ನೇ ಜೂನ್, 2023 ರಂದು ವಿಶ್ವ ಹಾಲು ದಿನಾಚರಣೆ – 2023 ಹಾಗೂ ವೈಜ್ಞಾನಿಕ ಹೈನುಗಾರಿಕೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ 25 ಜನ ಮಹಿಳೆಯರು ಭಾಗವಹಿಸಿದ್ದರು.




- ಜಾನುವಾರು ಸಂಶೋಧನೆ ಹಾಗೂ ಮಾಹಿತಿ ಕೇಂದ್ರ(ದೇವಣಿ), ಕಟ್ಟಿತುಗಾಂವ, ಬೀದರ, ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ, ಬೆಂಗಳೂರು ಹಾಗೂ ಕಲಬುರಗಿ–ಬೀದರ ಹಾಗೂ ಯಾದಗಿರ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ(ನಿ) ಕಲಬುರಗಿ, ಇವರ ಸಂಯುಕ್ತಾಶ್ರಯದಲ್ಲಿ 26ನೇ ಜೂನ್, 2023 ರಂದು ಒಕ್ಕೂಟದ ಶೇಖರಣೆ ಮತ್ತು ತಾಂತ್ರಿಕ ವಿಭಾಗದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ "ಮೇವಿನ ತಳಿಗಳು ಹಾಗೂ ಉಪಯುಕ್ತತೆ" ಕುರಿತು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಒಟ್ಟು 40 ಅಧಿಕಾರಿಗಳು ಭಾಗವಹಿಸಿದ್ದರು.



**ಹೈನು ವಿಜ್ಞಾನ ಮಹಾವಿದ್ಯಾಲಯ, ಕಲಬುರಗಿ**

- ರಾಷ್ಟ್ರೀಯ ಹಾಲು ದಿನಾಚರಣೆ ಅಂಗವಾಗಿ ಹೈನು ವಿಜ್ಞಾನ ಮಹಾವಿದ್ಯಾಲಯ, ಕಲಬುರಗಿ ಹಾಗೂ ಹೈನುವಿಜ್ಞಾನ ಮಹಾವಿದ್ಯಾಲಯ, ಕಲಬುರಗಿಯ ಹಳೆಯ ವಿದ್ಯಾರ್ಥಿಗಳ ಸಂಘದ ಸಹಯೋಗದೊಂದಿಗೆ 'ಹೈನು ಉದ್ಯಮದಲ್ಲಿ ಆಹಾರ ಸುರಕ್ಷತಾ ನಿಯಂತ್ರಣ' ಕುರಿತು ಒಂದು ದಿನದ ಕಾರ್ಯಾಗಾರವನ್ನು ಜನವರಿ 4, 2023 ರಂದು ಆಯೋಜಿಸಲಾಯಿತು. ಸದರಿ ಕಾರ್ಯಾಗಾರವನ್ನು ಮಾನ್ಯ ಕುಲಪತಿಗಳಾದ ಪ್ರೊ॥ ಕೆ.ಸಿ. ವೀರಣ್ಣ ರವರು ಉದ್ಘಾಟಿಸಿದರು.




**ವನ್ಯಜೀವಿ ಪಶುವೈದ್ಯಕೀಯ ಸಂಶೋಧನಾ ಸಂಸ್ಥೆ, ದೊಡ್ಡಾಲುವಾರ**

- ವನ್ಯಜೀವಿ ಪಶುವೈದ್ಯಕೀಯ ಸಂಶೋಧನಾ ಸಂಸ್ಥೆಯಲ್ಲಿ ಪಶುಸಂಗೋಪನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಕರ್ನಾಟಕ ಸರ್ಕಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಪಶುವೈದ್ಯಾಧಿಕಾರಿಗಳಿಗೆ "ವನ್ಯಜೀವಿಗಳಲ್ಲಿ ರಾಸಾಯನಿಕ ಸಂಯೋಜನೆ" ಕುರಿತು 13ನೇ ಫೆಬ್ರುವರಿ, 2023 ರಂದು ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.




**ಮೀನುಗಾರಿಕೆ ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ಭೂತನಾಳ–ವಿಜಯಪುರ**

- 30ನೇ ಜನವರಿ, 2023 ರಂದು ಮೀನುಗಾರಿಕೆ ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ಭೂತನಾಳ ವಿಜಯಪುರದಲ್ಲಿ "ವೈಜ್ಞಾನಿಕ ಮೀನು ಸಾಕಣೆ" ಕುರಿತು ರೈತರಿಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

- ಪಶುಸಂಗೋಪನೆ ಪಾಲಿಟೆಕ್ನಿಕ್, ಡೊರನಹಳ್ಳಿ ವಿದ್ಯಾರ್ಥಿಗಳಿಗೆ "ವೈಜ್ಞಾನಿಕ ಮೀನು ಸಾಕಣೆ" ಕುರಿತು ಒಂದು ದಿನದ ಕಾರ್ಯಾಗಾರವನ್ನು, 26ನೇ ಫೆಬ್ರುವರಿ, 2023 ರಂದು

ಮೀನುಗಾರಿಕೆ ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ಭೂತನಾಳ, ವಿಜಯಪುರದಲ್ಲಿ ಆಯೋಜಿಸಲಾಯಿತು. ಈ ಕಾರ್ಯಾಗಾರದಲ್ಲಿ 39 ವಿದ್ಯಾರ್ಥಿಗಳು ಭಾಗವಹಿಸಿದ್ದರು.




- ರೈತರಿಗೆ "ಬಯೋಫ್ಲೋಕ್ ವ್ಯವಸ್ಥೆಯಲ್ಲಿ ಮೀನು ಸಾಕಣೆ" ಕುರಿತು 10ನೇ ಮಾರ್ಚ್, 2023 ರಂದು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ 89 ರೈತರು ಭಾಗವಹಿಸಿದ್ದರು.



## ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ–ಮಂಗಳೂರು

- ಭಾ.ಕೃ.ಅ.ಪ.–ಕೃಷಿ ವಿಜ್ಞಾನ ಕೇಂದ್ರ (ದ.ಕ.) ಮಂಗಳೂರು ವತಿಯಿಂದ 21ನೇ ಏಪ್ರಿಲ್, 2023 ರಂದು ಬೆಳ್ತಂಗಡಿ ತಾಲೂಕಿನ ಹೊಸಂಗಡಿ ಗ್ರಾಮದಲ್ಲಿ ಮುಂಚೂಣಿ ಪ್ರಾತ್ಯಕ್ಷಿಕೆ ಅಡಿಯಲ್ಲಿ ಅಧಿಕ ಇಳುವರಿ ಕೊಡುವ ಮೀಟರ್ ಅಲಸಂದೆಯ ಅರ್ಕ ಮಂಗಳ ತಳಿಯ ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು.



- ಭಾ.ಕೃ.ಅ.ಪ–ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡದಿಂದ 'ಮಣ್ಣು ಪರೀಕ್ಷೆಯ ಮಹತ್ವ ಮತ್ತು ಮಣ್ಣಿನ ಮಾದರಿ ಸಂಗ್ರಹಣೆಯ ವಿಧಾನ' ಕುರಿತು ಮಂಗಳೂರಿನ ಮೀನುಗಾರಿಕಾ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗೆ ಒಂದು ದಿನದ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು 15ನೇ ಮೇ, 2023 ರಂದು ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ 37 ವಿದ್ಯಾರ್ಥಿಗಳು ಭಾಗವಹಿಸಿದರು.



- ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಬೆಳ್ತಂಗಡಿಯು ಸಹಯೋಗದೊಂದಿಗೆ ಭಾ.ಕೃ.ಅ.ಪ–ಕೃಷಿ ವಿಜ್ಞಾನ ಕೇಂದ್ರವು ವೈಜ್ಞಾನಿಕ ಭತ್ತದ ಕೃಷಿಯಲ್ಲಿ ರಸಗೊಬ್ಬರ ನಿರ್ವಹಣೆ' ಕುರಿತು 20ನೇ ಮೇ, 2023 ರಂದು ಅಂತರ್ಜಾಲ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿತು. ಈ ಕಾರ್ಯಕ್ರಮದಲ್ಲಿ 28 ರೈತರು ಭಾಗವಹಿಸಿದ್ದರು.

- ತುಂಬೆಯ ಬಿಎ ಐಟಿಐ ತರಬೇತಿ ಸಂಸ್ಥೆಯಲ್ಲಿ 23ನೇ ಮೇ, 2023 ರಂದು "ಆಹಾರ ಭದ್ರತೆಗೆ ಪರಿಸರ ಸ್ನೇಹಿ ಜೀವನ ಶೈಲಿ" ಕುರಿತು ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸದರಿ ಸಂಸ್ಥೆಯ ಸಿಬ್ಬಂದಿಗಳು ಹಾಗೂ 67 ವಿದ್ಯಾರ್ಥಿಗಳು ಭಾಗವಹಿಸಿದ್ದರು



- 24ನೇ ಮೇ, 2023 ರಂದು ಮೂಡಬಿದ್ರೆ ತಾಲೂಕಿನ ಶಿರ್ತಾಡಿ ಗ್ರಾಮದಲ್ಲಿ "ಪರಿಸರ ಸ್ನೇಹಿ ಜೀವನ ಶೈಲಿ" ಕುರಿತು ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಶ್ರೀ ತುಳಸಿ ಮಹಿಳಾ ಸಂಜೀವಿನಿ ಒಕ್ಕೂಟದ 21 ಸದಸ್ಯರು ಉಪಸ್ಥಿತರಿದ್ದರು.

- 27ನೇ ಮೇ, 2023 ರಂದು ಬಂಟ್ವಾಳ ತಾಲೂಕಿನ ಪೂನಚ ಗ್ರಾಮದಲ್ಲಿ ಹವಾಮಾನ ಸ್ಥಿತಿ ಸ್ಥಾಪಕ ಕೃಷಿಯ ಬಗ್ಗೆ ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಉಜ್ವಲ್ ಸಂಜೀವಿನಿ ಒಕ್ಕೂಟದ 30 ಸದಸ್ಯರು ಉಪಸ್ಥಿತರಿದ್ದರು.

## ಪ್ರಶಸ್ತಿಗಳು/ಮನ್ನಣೆಗಳು:

| # | ವಿಜ್ಞಾನಿಯ ಹೆಸರು ಮತ್ತು ಸಂಸ್ಥೆ | ಪ್ರಶಸ್ತಿ | ದಿನಾಂಕ | ಆಯೋಜಕರು |
|---|---|---|---|---|
| 1 | ಡಾ. ಶ್ರೀಕೃಷ್ಣ ಇಸ್ಲೂರ್ | ಅತ್ಯುತ್ತಮ ಶಿಕ್ಷಕ ಪ್ರಶಸ್ತಿ | 17ನೇ ಜನೆವರಿ 2023 | ಕಪಪಮೀವಿವಿ, ಬೀದರ |
| 2 | ಡಾ. ಎಚ್.ಸಿ. ಇಂದ್ರೇಶ್ | ಅತ್ಯುತ್ತಮ ಪಶುವೈದ್ಯ ಪ್ರಶಸ್ತಿ | 28ನೇ ಜನೆವರಿ 2023 | ಕರ್ನಾಟಕ ಪಶುವೈದ್ಯಕೀಯ ಸಂಘ, ಬೆಂಗಳೂರು |
| 3 | ಡಾ. ರಮೇಶ ಎಚ್.ಎಸ್. | ಯುವ ವಿಜ್ಞಾನಿ ಪ್ರಶಸ್ತಿ | ಫೆಬ್ರುವರಿ 2023 | ಐಎನ್ಆರ್‌ಸಿ ಪ್ರಶಸ್ತಿ |
| 4 | ಡಾ. ನಾಗಪ್ಪ ಕೆ. | ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಅತ್ಯುತ್ತಮ ಕನ್ನಡ ಭಾಷೆಯ ಪುಸ್ತಕ ಪ್ರಶಸ್ತಿ | ಮಾರ್ಚ್ 2023 | ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ |
| 5 | ಡಾ. ಪ್ರಕಾಶಕುಮಾರ ರಾಠೋಡ | ಅತ್ಯುತ್ತಮ ಕೃಷಿ ವಿಸ್ತರಣಾ ಪುಸ್ತಕ | 13ನೇ ಜೂನ್ 2023 | ಮ್ಯಾನೇಜ್, ಹೈದ್ರಾಬಾದ |

ತೆರೆದ-ಅಂಚೆ

ಮುದ್ರಿತ ವಿಷಯ

ಗೆ,


ಪ್ರಧಾನ ಸಂಪಾದಕರು
**ಡಾ. ಎನ್.ಎ. ಪಾಟೀಲ**
ವಿಸ್ತರಣಾ ನಿರ್ದೇಶಕರು

ಸಹ ಸಂಪಾದಕರು
**ಡಾ. ಪ್ರಕಾಶಕುಮಾರ ರಾಠೋಡ**
ಸಹ ಪ್ರಾಧ್ಯಾಪಕರು


ವಿತರಣೆವಾಗಿಲ್ಲದಿದ್ದರೆ ದಯವಿಟ್ಟು ಈ ವಿಳಾಸಕ್ಕೆ ಹಿಂದುರುಗಿಸಿ :
**ವಿಸ್ತರಣಾ ನಿರ್ದೇಶಕರು**
**ಕಪಪಮೀವಿವಿ,** ಅಂಚೆ ಸಂ. 6,
ನಂದಿನಗರ, ಬೀದರ-585 226. ಕರ್ನಾಟಕ

